ಪರಿಶೀಲನೆಯಲ್ಲಿದೆ ಎಂದು ಹೇಳಿದ್ದರು. ಧಾರವಾಡದಲ್ಲಿ ಕೆ.ಎ.ಟಿ. ಪೀಠವನ್ನು ಸ್ಥಾಪನೆ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:– ಧಾರವಾಡ Bench ಗೆ ಸಂಬಂಧಪಟ್ಟಂತೆ ಕೆ.ಎ.ಟಿ. ಪೀಠವನ್ನು ಬೆಳಗಾವಿಯಲ್ಲಿ ಮಾಡುತ್ತೇವೆ ಎಂದು ನಾವು ಈಗಾಗಲೇ ಒಪ್ಪಿಕೊಂಡಿದ್ದೇವೆ. ಆ ಬಗ್ಗೆ Cabinet decision ಆಗಿದೆ. ಅದರಂತೆ ಬೆಳಗಾವಿಯಲ್ಲಿ ಮಾಡುತ್ತೇವೆ. ಅದೇ ರೀತಿ ಗುಲಬರ್ಗಾದಲ್ಲಿ ಕೂಡ ಒಂದು ಕೆ.ಎ.ಟಿ. ಬೇಕು ಎಂದು ಕೇಳುತ್ತಿದ್ದಾರೆ. ಅಲ್ಲೂ ಕೂಡ ಒಂದು ಕೆ.ಎ.ಟಿ. ಪೀಠವನ್ನು ಮಾಡುತ್ತೇವೆ.

* * * * * *

ಅಧ್ಯಕ್ಷರು:– ಈಗ ಡಾ॥ ವಿಶ್ವನಾಥ್ ಈ. ಪಾಟೀಲ್‌ರವರು.

(ಮಾನ್ಯ ಸದ್ಯರು ಹಾಜರಿರಲಿಲ್ಲ)

* * * * * *

11. ವಿಷಯ: ಕಲ್ಲುಗಣಿ ಗುತ್ತಿಗೆಯನ್ನು ರದ್ದುಪಡಿಸಿ ಇ–ಹರಾಜು ಮಾಡಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಹಾಗೂ ಸಣ್ಣ ಮತ್ತು ಮಧ್ಯಮ ಕಲ್ಲುಗಣಿ ಗುತ್ತಿಗೆದಾರರಿಗೆ ತೊಂದರೆಯಾಗುತ್ತಿರುವ ಬಗ್ಗೆ.

– – –

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಮಾನ್ಯ ಅಧ್ಯಕ್ಷರೆ, ಕಲ್ಲುಗಣಿ ಗುತ್ತಿಗೆಯನ್ನು ರದ್ದುಪಡಿಸಿ ಇ–ಹರಾಜು ಮಾಡಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಹಾಗೂ ಸಣ್ಣ ಮತ್ತು ಮಧ್ಯಮ ಕಲ್ಲುಗಣಿ ಗುತ್ತಿಗೆದಾರರಿಗೆ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಪ್ರಸ್ತಾಪಿತ ತಿದ್ದುಪಡಿ ಪೂರ್ವದಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 8ಬಿ ರಡಿ ಸರ್ಕಾರಿ ಜಾಗಗಳಲ್ಲಿ ಟೆಂಡರ್ ಕಂ ಹರಾಜು ಮೂಲಕ ಗಣಿಗಾರಿಕೆ ಅನುಮತಿ ನೀಡಲು ಅವಕಾಶ ನೀಡಲಾಗಿತ್ತು ಹಾಗೂ ಇದಕ್ಕೆ ವ್ಯತಿರಿಕ್ತವಾಗಿ ನಿಯಮ 9 ಮತ್ತು 21 ರಲ್ಲಿ ಸಾರ್ವಜನಿಕರಿಂದ ಬರುವ ಅರ್ಜಿಗಳನ್ನು First come First serve ಆಧಾರದಲ್ಲಿ ವಿಲೇವಾರಿ ಮಾಡಲು ಸಹ ಅವಕಾಶ ಕಲ್ಪಿಸಲಾಗಿತ್ತು. ಆದರೆ ಬಹುಪಾಲು ನಿಯಮ 9 ಮತ್ತು 21ರಡಿ ಅರ್ಜಿ ವಿಲೇವಾರಿ ಮಾಡುತ್ತಿದ್ದ ಕಾರಣ ವ್ಯಾಜ್ಯಗಳು ಉಂಟಾಗುತ್ತಿದ್ದವು ಮತ್ತು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯವು ಎಲ್ಲಾ ಸರ್ಕಾರಿ ಜಾಗಗಳಲ್ಲಿ ನಿಯಮ 8ಬಿರ ಪ್ರಕಾರವೇ ಗಣಿಗಾರಿಕೆಗೆ ಅನುಮತಿ ನೀಡಲು ಆದೇಶ ನೀಡಿರುತ್ತದೆ.

ಏತನ್ಮಧ್ಯೆ ಕೇಂದ್ರ ಸರ್ಕಾರವು ಸಹ ಎಂಎಂಡಿಆರ್ ಕಾಯ್ದೆಗೆ ತಿದ್ದುಪಡಿ ಹೊರಡಿಸಿ ಮುಖ್ಯ ಖನಿಜ ಗಣಿಗುತ್ತಿಗೆ ಹಂಚಿಕೆಯಲ್ಲಿ ಇ–ಹರಾಜು ಪ್ರಕ್ರಿಯೆ ಅಳವಡಿಸಿಕೊಳ್ಳಲು ನಿರ್ದಿಷ್ಟಪಡಿಸಿರುತ್ತದೆ ಹಾಗೂ 31 ಮುಖ್ಯ ಖನಿಜಗಳನ್ನು ಉಪ ಖನಿಜಗಳಾಗಿ ವರ್ಗೀಕರಿಸಿರುತ್ತದೆ. ಆದ್ದರಿಂದ ರಾಜ್ಯ ಸರ್ಕಾರವು ಸದರಿ ಖನಿಜಗಳಿಗೆ ಸೂಕ್ತವಾಗಿ ನಿಯಮಗಳನ್ನು ರೂಪಿಸುವ ನಿಟ್ಟಿನಲ್ಲಿ ಉಪ ಖನಿಜ ನಿಯಮಾವಳಿಗೆ ತಿದ್ದುಪಡಿ ತರಲು ಕ್ರಮವಹಿಸಲಾಗುತ್ತಿದೆ.

ಪ್ರಸ್ತಾಪಿತ ತಿದ್ದುಪಡಿ ನಿಯಮಾವಳಿಗಳಲ್ಲಿ ಸರ್ಕಾರಿ ಜಾಗಗಳಲ್ಲಿ ದೊರಕುವ ಮೇಲ್ಕಂಡ 31 ಖನಿಜಗಳು ಸೇರಿದಂತೆ ಇತರೆ ಎಲ್ಲಾ ಉಪಖನಿಜಗಳಿಗೆ ಪಾರದರ್ಶಕವಾದ, ನ್ಯಾಯ ಸಮ್ಮತವಾದ, ಸಾಮಾಜಿಕ ನ್ಯಾಯ ಕಾಪಾಡಲು ಅನುಕೂಲ ಆಗುವ ಹರಾಜು ಪದ್ಧತಿಯಲ್ಲಿ ಗುತ್ತಿಗೆ ಮಂಜೂರು ಮಾಡಲು ಉದ್ದೇಶಿಸಿ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಪಡೆಯಲಾಗಿದ್ದು ಅವುಗಳನ್ನು ಸೂಕ್ತವಾಗಿ ಪರಿಶೀಲಿಸಿ ಅಂತಿಮಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ರಾಜ್ಯ ಸರ್ಕಾರವು ಈ ಹಿಂದಿನ ನಿಯಮಾವಳಿ ಪ್ರಕಾರ ಎಂ–ಸ್ಯಾಂಡ್ ಉದ್ದೇಶಕ್ಕಾಗಿ

ಇ-ಹರಾಜಿನ ಮೂಲಕ 20 ಕಟ್ಟಡ ಕಲ್ಲು ಬ್ಲಾಕ್‌ಗಳನ್ನು ಹಂಚಿಕೆ ಮಾಡಿ 30 ಬ್ಲಾಕ್‌ಗಳನ್ನು ಮರು ಟೆಂಡರ್ ಪ್ರಕ್ರಿಯೆಗೆ ಒಳಪಡಿಸಿದೆ.

ಪ್ರಸ್ತಾಪಿತ ತಿದ್ದುಪಡಿಯಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಕಲ್ಲು ಗಣಿ ಗುತ್ತಿಗೆಗಳ ಅವಧಿಯನ್ನು ವಿಸ್ತರಿಸಲು ಹಾಗೂ ಅವಧಿ ಮುಗಿದ ನಂತರ ಎಲ್ಲಾ ಪ್ರದೇಶಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಿ ಕ್ರಷರ್, ಎಂ-ಸ್ಯಾಂಡ್ ಘಟಕ ಹಾಗೂ ಗ್ರಾನೈಟ್ ಸಂಸ್ಕರಣೆ ಘಟಕ ರೀತಿಯ ಮೌಲ್ಯವರ್ಧಿತ ಕೈಗಾರಿಕೆ ಹೊಂದಿರುವವರಿಗೆ "Right of first refusal" ನೀಡಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ನವೀಕರಣಕ್ಕೆ ಬಾಕಿ ಇರುವ ಪ್ರಕರಣಗಳಿಗೆ ಸ್ವಯಂಚಾಲಿತವಾಗಿ ಅವಧಿ ವಿಸ್ತರಣೆ ಆಗುವುದರಿಂದ ಬಹಳಷ್ಟು ಅರ್ಜಿಗಳು ಏಕಕಾಲಕ್ಕೆ ವಿಲೇವಾರಿಯಾಗುತ್ತದೆ.

ಪ್ರಸ್ತುತ ಕ್ರಷರ್ ನಿಯಮಾವಳಿಗೆ ಯಾವುದೇ ತಿದ್ದುಪಡಿ ತರುವ ಉದ್ದೇಶ ಸರ್ಕಾರಕ್ಕೆ ಇರುವುದಿಲ್ಲ. ಆದರೆ ಕಲ್ಲು ಗಣಿಗುತ್ತಿಗೆ ನೀಡುವ ನಿಯಮಾವಳಿಗೆ ಮಾತ್ರ ತಿದ್ದುಪಡಿ ತರುತ್ತಿದ್ದು, ಸಣ್ಣ ಪ್ರಮಾಣದಲ್ಲಿ ಗಣಿಗಾರಿಕೆ ನಡೆಸುವವರ ಹಾಗೂ ಗಣಿಗಾರಿಕೆ ಮೇಲೆ ಅವಲಂಬಿತ ಆಗಿರುವವರ ಹಿತವನ್ನು ಕಾಪಾಡಲು ನಿಯಮಾವಳಿಗಳನ್ನು ಅಂತಿಮಗೊಳಿಸುವ ಸಮಯದಲ್ಲಿ ಅಂತಹ ವರ್ಗದವರಿಗೆ ಹರಾಜು ಪ್ರಕ್ರಿಯೆಯಿಂದ ವಿನಾಯ್ತಿ ನೀಡಲು ಅವಕಾಶ ಕಲ್ಪಿಸಲಾಗುವುದು.

ಪ್ರಸ್ತಾಪಿತ ನಿಯಮಾವಳಿಯಲ್ಲಿ ರಾಜ್ಯಾದ್ಯಂತ ಯಾವುದೇ ವ್ಯಕ್ತಿಗಳು 10 ಎಕರೆ ಹಾಗೂ ಸಂಸ್ಥೆಗಳು 50 ಎಕರೆ ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶದಲ್ಲಿ ಕಲ್ಲುಗಣಿಗುತ್ತಿಗೆ ಹೊಂದಲು ನಿರ್ಬಂಧ ವಿಧಿಸಲಾಗಿದೆ. ಕಟ್ಟಡ ಕಲ್ಲು ಗಣಿಗಾರಿಕೆಯು ಬಹಳಷ್ಟು ವಿಸ್ತಾರಗೊಂಡಿದ್ದು, ದೈಹಿಕ ಶ್ರಮದಿಂದ ಗಣಿಗಾರಿಕೆ ನಡೆಸುವ ಪ್ರಮಾಣ ಇಳಿಕೆಯಾಗಿದ್ದು, ಬಹುಪಾಲು ಯಾಂತ್ರೀಕೃತ ಮತ್ತು ಅರೆ ಯಾಂತ್ರೀಕೃತ ಗಣಿಗಾರಿಕೆ ಪದ್ಧತಿಯನ್ನು ಅಳವಡಿಸಿಕೊಂಡು ಮೌಲ್ಯವರ್ಧಿತ ಘಟಕಗಳಿಗೆ ಬಳಕೆ ಮಾಡಲ್ಪಡುತ್ತಿದೆ. ಆದ್ದರಿಂದ ನೈಸರ್ಗಿಕ ಸಂಪತ್ತನ್ನು ಪಾರದರ್ಶಕವಾಗಿ ಮತ್ತು ಸ್ಪರ್ಧಾತ್ಮಕವಾಗಿ ಹಂಚಿಕೆ ಮಾಡಲು ಇ-ಹರಾಜು ಕ್ರಮವು ಸೂಕ್ತವೆಂದು ಕಂಡುಬಂದಿದೆ.

ಪ್ರಸ್ತಾಪಿತ ತಿದ್ದುಪಡಿಯ ಪ್ರಕಾರ ಎಲ್ಲಾ ಅನುಮತಿಗಳನ್ನು ಮುಂಚಿತವಾಗಿ ಪಡೆದು ಹರಾಜು ಪ್ರಕ್ರಿಯೆ ನಡೆಸುವುದರಿಂದ ತ್ವರಿತವಾಗಿ ಹಂಚಿಕೆ ಮಾಡಬಹುದು ಹಾಗೂ ಉತ್ಪಾದನೆ ಸಹ ತ್ವರಿತವಾಗಿ ಪ್ರಾರಂಭಗೊಳ್ಳುವುದರಿಂದ ಮಾರುಕಟ್ಟೆಯಲ್ಲಿ ಬೆಲೆ ಸಹ ಇಳಿಕೆಯಾಗಲು ಸಹಕಾರಿಯಾಗುತ್ತದೆ.

ಪಾರದರ್ಶಕ ಮತ್ತು ಸ್ಪರ್ಧಾತ್ಮಕ ಹಂಚಿಕೆಯಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಸಾಮಾಜಿಕ ನ್ಯಾಯವನ್ನು ಸಹ ಗಣನೆಗೆ ತೆಗೆದುಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡಗಳಿಗೆ ಈಗಾಗಲೇ ಕಲ್ಪಿಸಿರುವ ಮೀಸಲಾತಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸೂಕ್ತ ರೀತಿಯಲ್ಲಿ ತಿದ್ದುಪಡಿ ನಿಯಮಾವಳಿಗಳನ್ನು ಅಂತಿಮಗೊಳಿಸಲಾಗುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಈಗ ನೀವು ಕಲ್ಲುಗಣಿ ಗುತ್ತಿಗೆಯನ್ನು ಇ–ಹರಾಜು ಮೂಲಕ ಮಾಡಿದರೆ ಸಣ್ಣ ಮತ್ತು ಮಧ್ಯಮ ಕಲ್ಲುಗಣಿದಾರರು ಮತ್ತು ಗುತ್ತಿಗೆದಾರರಿಗೆ ಬಹಳ ತೊಂದರೆಯಾಗುತ್ತದೆ. ಇ–ಹರಾಜು ಮೂಲಕ ಮಾಡಿದರೆ ಆಂಧ್ರದ ಗುತ್ತಿಗೆದಾರರು ಹೆಚ್ಚಾಗಿ ಬರುವ ಸಂಭವವಿದೆ. ಈಗಾಗಲೇ ಶೇಕಡ 50 ರಷ್ಟು ಆಂಧ್ರದವರು ಬಂದಿದ್ದಾರೆ. ಈಗ ಮತ್ತೆ ಶೇಕಡ 50 ರಷ್ಟು ಅವರೇ ಬಂದರೆ, ನಮ್ಮ ಇಡೀ ಕಲ್ಲುಗಣಿ ಗುತ್ತಿಗೆಯನ್ನು ಅವರೇ ತೆಗೆದುಕೊಂಡರೆ, ಸ್ಥಳೀಯವಾಗಿ 2–3 ಎಕರೆ ಪ್ರದೇಶದಲ್ಲಿ ಕಲ್ಲುಗಣಿ ಮಾಡುತ್ತಿರುವವರಿಗೆ ತೊಂದರೆಯಾಗುತ್ತದೆ. ಹಾಗಾಗಿ, ದೊಡ್ಡದೊಡ್ಡ ಗಣಿಗಳಿಗೆ ಇ–ಹರಾಜು ಮೂಲಕ ಮಾಡಿಕೊಳ್ಳಿ. ಇಂತಿಷ್ಟು ಎಕರೆ ಪ್ರದೇಶದೊಳಗಿರುವವರು ಎಂದು ಮಾಡಿ ಸಣ್ಣ ಮತ್ತು ಮಧ್ಯಮ ಕಲ್ಲುಗಣಿ ಗುತ್ತಿಗೆಗಳನ್ನು ಇದುವರೆಗೆ ನಡೆಸಿಕೊಂಡು ಬರುತ್ತಿರುವವರಿಗೇ ಅದನ್ನು ಉಳಿಸಿಕೊಡತಕ್ಕಂಥ ಕೆಲಸ ಮಾಡಬೇಕು. ಸಣ್ಣ–ಸಣ್ಣವರಿಗೆ ಇ–ಹರಾಜು ಬೇಡ ಎಂದು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಕಲ್ಲುಗಣಿ ಗುತ್ತಿಗೆಯನ್ನು ನಾವು ಇ–ಹರಾಜು ಮಾಡಬೇಕೆಂದಿದ್ದೇವೆ. ಅದಕ್ಕೆ objections call for ಮಾಡಿದ್ದೇವೆ. ಸಣ್ಣ ಪ್ರಮಾಣದ ಕಲ್ಲುಗಣಿ ಗುತ್ತಿಗೆದಾರರ ಬಗ್ಗೆ ಅವರು ಹೇಳುತ್ತಿದ್ದಾರೆ. ಅವರ ಹಿತ ಕಾಪಾಡಲು ಏನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

* * * * * *

ಅಧ್ಯಕ್ಷರು:– ಡಾ॥ ಕೆ. ಸುಧಾಕರ್‌ರವರು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಅಧ್ಯಕ್ಷರು:– ಪುಟ್ಟಣ್ಣಯ್ಯನವರು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಅಧ್ಯಕ್ಷರು:– ಈಗಾಗಲೇ ಎಂಟೂವರೆ ಗಂಟೆಯಾಗಿದೆ. ಈಗ ಸದನವನ್ನು ಮುಂದೂಡಿ, ನಾಳೆ ಬೆಳಗ್ಗೆ 10.00 ಗಂಟೆಗೆ ಪುನಃ ಸೇರೋಣ.

(ಸದನವನ್ನು ರಾತ್ರಿ 8 ಗಂಟೆ 25 ನಿಮಿಷಕ್ಕೆ ಮುಂದೂಡಿ ಪುನಃ ದಿನಾಂಕ 8ನೇ ಜುಲೈ 2015ರ ಬುಧವಾರದಂದು ಬೆಳಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

* * * * * *